**CCE PF**
**CCE PR**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018**

**S.S.L.C. EXAMINATION, MARCH / APRIL, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 02. 04. 2018 ] ಸಂಕೇತ ಸಂಖ್ಯೆ : **83-K (Chem.)**

Date : 02. 04. 2018 ] CODE NO. : **83-K (Chem.)**

## ವಿಷಯ : ವಿಜ್ಞಾನ

## Subject : SCIENCE

**(ರಸಾಯನಶಾಸ್ತ್ರ / Chemistry)**

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಇವುಗಳಲ್ಲಿ ಅಸ್ಫಟಿಕ ಸಿಲಿಕಾನ್‌ನ ಒಂದು ಲಕ್ಷಣವನ್ನು ಗುರುತಿಸಿ.<br>***ಉತ್ತರ :*** (C) — ಗಾಳಿಯಲ್ಲಿ ಕಾಯಿಸಿದಾಗ ಮೇಲ್ಮೈ ಪದರವು ಉತ್ಕರ್ಷಣ ಕ್ರಿಯೆಗೆ ಒಳಗಾಗುತ್ತದೆ | 1 |
| 10. | ಜಲೀಯ ದ್ರಾವಣದಲ್ಲಿ ಅಪೂರ್ಣವಾಗಿ ವಿಯೋಜನೆ ಹೊಂದುವ ಸಂಯುಕ್ತಗಳ ಗುಂಪು<br>***ಉತ್ತರ :*** (B) — ಕಾರ್ಬಾನಿಕ್ ಆಮ್ಲ, ಫಾಸ್ಫಾರಿಕ್ ಆಮ್ಲ | 1 |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ***A*-ಪಟ್ಟಿಯಲ್ಲಿ ಸಾವಯವ ಸಂಯುಕ್ತಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು *B*-ಪಟ್ಟಿಯಲ್ಲಿ ಅವುಗಳನ್ನು ನಡೆಸುವ ವಿಧಾನಗಳನ್ನೂ ನೀಡಲಾಗಿದೆ. ಅವುಗಳನ್ನು ಹೊಂದಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** | |

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ಮಿಥೇನ್ ಅನಿಲದ ತಯಾರಿಕೆ | (i) ಎಣ್ಣೆ ಅಥವಾ ಕೊಬ್ಬುಗಳನ್ನು ಬಳಕೆ ಮಾಡಿ ಅವುಗಳಿಂದ ಕೊಬ್ಬಿನಾಮ್ಲಗಳ ಲವಣಗಳನ್ನು ತಯಾರಿಸುವುದು |
| (B) ಆದೇಶನ ಕ್ರಿಯೆ | (ii) ದ್ರವ ಎಣ್ಣೆಗಳನ್ನು ಪರ್ಯಾಪ್ತ ಘನ ಕೊಬ್ಬುಗಳನ್ನಾಗಿ ಪರಿವರ್ತಿಸುವುದು |
| (C) ಹೈಡ್ರೋಜನೀಕರಣ | (iii) ಸೋಡಿಯಂ ಅಸಿಟೇಟ್ ಮತ್ತು ಸೋಡಾ ಲೈಮ್ ಮಿಶ್ರಣವನ್ನು ಕಾಯಿಸುವುದು |
| (D) ಸಾಬೂನೀಕರಣ | (iv) ಅಮೋನಿಯಂ ಸಯನೇಟ್‌ನ ಜಲೀಯ ದ್ರಾವಣವನ್ನು ಕಾಯಿಸುವುದು |
| | (v) ಮೀಥೇನ್ ಅನ್ನು ಗಾಳಿಯಲ್ಲಿ ಉರಿಸುವುದು |
| | (vi) ಎಥೆನಾಲ್ ಅನ್ನು ಆಮ್ಲೀಯ ಪೊಟಾಷಿಯಂ ಪರಮಾಂಗನೇಟ್ ಉಪಸ್ಥಿತಿಯಲ್ಲಿ ಕಾಯಿಸುವುದು |
| | (vii) ಮೀಥೇನ್ ಮತ್ತು ಕ್ಲೋರಿನ್‌ಗಳ ಮಿಶ್ರಣವನ್ನು ನೇರಳಾತೀತ ಕಿರಣಗಳಿಗೆ ಒಡ್ಡುವುದು |

***ಉತ್ತರ :***

| ***A* ಪಟ್ಟಿ** | ***B* ಪಟ್ಟಿ** | | ಅಂಕಗಳು |
|---|---|---|---|
| (A) | (iii) ಸೋಡಿಯಂ ಅಸಿಟೇಟ್ ಮತ್ತು ಸೋಡಾ ಲೈಮ್ ಮಿಶ್ರಣವನ್ನು ಕಾಯಿಸುವುದು | 1 | |
| (B) | (vii) ಮೀಥೇನ್ ಮತ್ತು ಕ್ಲೋರಿನ್‌ಗಳ ಮಿಶ್ರಣವನ್ನು ನೇರಳಾತೀತ ಕಿರಣಗಳಿಗೆ ಒಡ್ಡುವುದು | 1 | |
| (C) | (ii) ದ್ರವ ಎಣ್ಣೆಗಳನ್ನು ಪರ್ಯಾಪ್ತ ಘನ ಕೊಬ್ಬುಗಳನ್ನಾಗಿ ಪರಿವರ್ತಿಸುವುದು | 1 | |
| (D) | (i) ಎಣ್ಣೆ ಅಥವಾ ಕೊಬ್ಬುಗಳನ್ನು ಬಳಕೆ ಮಾಡಿ ಅವುಗಳಿಂದ ಕೊಬ್ಬಿನಾಮ್ಲಗಳ ಲವಣಗಳನ್ನು ತಯಾರಿಸುವುದು | 1 | 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ಸಿಲಿಕಾನ್ ಕಾರ್ಬೈಡ್ ಅನ್ನು ಹೇಗೆ ತಯಾರಿಸುತ್ತಾರೆ ? ಅದರ ಒಂದು ಉಪಯೋಗವನ್ನು ಬರೆಯಿರಿ.<br>***ಉತ್ತರ :***<br>ವಿದ್ಯುತ್ ಕುಲುಮೆಯಲ್ಲಿ ಸಿಲಿಕಾನ್ ಮತ್ತು ಕೋಕ್‌ನ ಮಿಶ್ರಣವನ್ನು ಕಾಸುವುದು. ½<br>ಅಥವಾ<br>$Si + C \rightarrow SiC$<br>ಸಿಲಿಕಾನ್ ಕಾರ್ಬೈಡ್ ಅನ್ನು<br>i) ಕತ್ತರಿಸುವ ಮತ್ತು ಉಜ್ಜುವ ಸಾಧನಗಳಲ್ಲಿ<br>ii) ಗ್ರಾನೈಟ್ ಪಾಲಿಷ್ ಮಾಡಲು (ಯಾವುದಾದರೂ ಒಂದು) ½ | 1 |
| 17. | ಸಕ್ಕರೆ ತಯಾರಿಕೆಯಲ್ಲಿ ಕಬ್ಬಿನ ರಸವಿರುವ ಸಂಗ್ರಾಹಕವನ್ನು ನಿರ್ವಾತ ಪಂಪಿಗೆ ಜೋಡಿಸುತ್ತಾರೆ. ಏಕೆ ?<br>***ಉತ್ತರ :***<br>★ ಕಡಿಮೆ ಒತ್ತಡ / ತಾಪದಲ್ಲಿ ನೀರನ್ನು ಆವೀಕರಿಸಲು<br>★ ಸಕ್ಕರೆಯನ್ನು ಕಡಿಮೆ ತಾಪದಲ್ಲಿ ಪಡೆಯಲು<br>★ ಕುದಿಯುವಿಕೆ ಅತ್ಯಂತ ಕಡಿಮೆ ತಾಪದಲ್ಲಿ ನಡೆಯಲು<br>(ಯಾವುದಾದರೂ ಎರಡು) ½ + ½ | 1 |
| 19. | 'ಕಾಕಂಬಿಯಿಂದ ಈಥೈಲ್ ಆಲ್ಕೋಹಾಲ್ ತಯಾರಿಕೆಯು ಹುದುಗುವಿಕೆ ಕ್ರಿಯೆಗೆ ಒಂದು ಉತ್ತಮ ಉದಾಹರಣೆಯಾಗಿದೆ.' ಕಾರಣಗಳನ್ನು ಕೊಡಿ.<br>***ಉತ್ತರ :***<br>ಹುದುಗುವಿಕೆ ಕ್ರಿಯೆಯಲ್ಲಿರುವಂತೆಯೇ,<br>★ ಯೀಸ್ಟ್‌ನ ಕಾರಣದಿಂದಾಗಿ, ಸುಕ್ರೋಸ್ ವಿಭಜನ ಕ್ರಿಯೆಗೆ ಒಳಗಾಗುತ್ತದೆ. 1<br>★ ತಾಪವನ್ನು ಸುಮಾರು 308 K ಇರುವಂತೆ ನೋಡಿಕೊಳ್ಳುತ್ತಾರೆ. 1<br>★ ಕಾಕಂಬಿಗೆ ನೀರನ್ನು ಬೆರೆಸಿ, ಸಾರತೆಯ ಮಟ್ಟವನ್ನು ಕಡಿಮೆ ಮಾಡುತ್ತಾರೆ.<br>★ ಈ ಕ್ರಿಯೆಯಲ್ಲಿ ಕಾರ್ಬನ್ ಡೈ ಆಕ್ಸೈಡ್ ಅನಿಲ ಬಿಡುಗಡೆಯಾಗುತ್ತದೆ.<br>★ ಕಿಣ್ವಗಳು (ಇನ್‌ವರ್ಟೇಸ್ ಮತ್ತು ಜೈಮೇಸ್) ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತವೆ.<br>(ಯಾವುದಾದರೂ ಎರಡು) | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ವಿದ್ಯುತ್ ಲೇಪನ ಕ್ರಿಯೆಯಲ್ಲಿ ಉಪಯೋಗಿಸುವ ಉಪಕರಣದ ಚಿತ್ರವನ್ನು ಬರೆದು, ಕೆಳಗಿನ ಭಾಗವನ್ನು ಗುರುತಿಸಿ.<br>ವಿದ್ಯುತ್ ಲೇಪನಕ್ಕೆ ಒಳಪಡುವ ವಸ್ತು.<br>***ಉತ್ತರ :***<br><br><br>ಚಿತ್ರಕ್ಕೆ — 1½<br>ಸರಿಯಾದ ಭಾಗಕ್ಕೆ — ½ | 2 |
| 27. | ಬಾಯ್ಲ್‌ನ ನಿಯಮವನ್ನು ನಿರೂಪಿಸಿ. ಬಾಯ್ಲ್‌ನ ನಿಯಮದ ಗಣಿತೀಯ ರೂಪವನ್ನು ಬರೆಯಿರಿ. ಈ ನಿಯಮಕ್ಕೆ ಒಂದು ಉದಾಹರಣೆ ಕೊಡಿ.<br>***ಅಥವಾ***<br>ಗ್ರಹಾಂನ ವಿಸರಣಾ ನಿಯಮವನ್ನು ನಿರೂಪಿಸಿ. ಗ್ರಹಾಂನ ವಿಸರಣಾ ನಿಯಮದ ಗಣಿತೀಯ ರೂಪವನ್ನು ಬರೆಯಿರಿ. ಈ ನಿಯಮಕ್ಕೆ ಒಂದು ಉದಾಹರಣೆ ಕೊಡಿ.<br>***ಉತ್ತರ :***<br>ಸ್ಥಿರ ತಾಪದಲ್ಲಿ ನಿರ್ದಿಷ್ಟ ರಾಶಿಯ ಅನಿಲದ ಗಾತ್ರವು ಅದರ ಒತ್ತಡಕ್ಕೆ ವಿಲೋಮಾನುಪಾತದಲ್ಲಿರುತ್ತದೆ. 1<br>$V \propto \frac{1}{P}$ ಅಥವಾ $V = K \times \frac{1}{P}$ ಅಥವಾ $PV = K$ ½<br>*ಉದಾಹರಣೆಗಳು :*<br>★ ಸಮುದ್ರದ ತಳದಿಂದ ಮೀನುಗಳನ್ನು ಮೇಲ್ಭಾಗಕ್ಕೆ ತಂದಾಗ ಇದಕ್ಕಿದ್ದಂತೆ ಸಾಯುವುದು.<br>★ ಸ್ಕೂಬಾ ಈಜುಗಾರರು ಸಮುದ್ರದ ಆಳದಿಂದ ಇದ್ದಕ್ಕಿದ್ದಂತೆ ಮೇಲೆ ಬರುವುದರಿಂದ ಪ್ರಾಣಾಪಾಯಕ್ಕೆ ಒಳಗಾಗುವುದು.<br>★ ಗಾಳಿ ತುಂಬಿದ ಬಲೂನನ್ನು ಹಿಸುಕಿದಾಗ ಒಡೆದು ಹೋಗುವುದು.<br>★ ವಿಮಾನ ಇದ್ದಕ್ಕಿದ್ದಂತೆ ಮೇಲೇರಿದಾಗ / ಕೆಳಗಿಳಿದಾಗ ಕಿವಿಯ ನೋವಿನ ಅನುಭವವಾಗುವುದು.<br>(ಬೇರೆ ಯಾವುದೇ ಸೂಕ್ತ ಉದಾಹರಣೆ) (ಯಾವುದಾದರೂ ಒಂದು) ½<br>***ಅಥವಾ*** | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ನಿರ್ದಿಷ್ಟ ತಾಪ ಮತ್ತು ಒತ್ತಡಗಳಲ್ಲಿ ಒಂದು ಅನಿಲದ ವಿಸರಣೆಯ ದರವು ಅದರ ಸಾಂದ್ರತೆಯ ವರ್ಗಮೂಲಕ್ಕೆ ವಿಲೋಮ ಅನುಪಾತದಲ್ಲಿರುತ್ತದೆ. 1

$r \propto \frac{1}{\sqrt{d}}$ ಅಥವಾ $r = K \times \frac{1}{\sqrt{d}}$ ಅಥವಾ $K = r\sqrt{d}$ ಅಥವಾ $r \propto \frac{1}{\sqrt{m}}$

(ಯಾವುದಾದರೂ ಒಂದು) ½


*ಉದಾಹರಣೆಗಳು :*

★ ಹೈಡ್ರೋಜನ್ ಕ್ಲೋರೈಡ್ ಆವಿಯು ಅಮೋನಿಯಾಗಿಂತ ನಿಧಾನವಾಗಿ ವಿಸರಣೆ ಹೊಂದುವುದು.

(ಯಾವುದಾದರೂ ಸೂಕ್ತ ಉದಾಹರಣೆ) ½ 2

30. ತಾಮ್ರದ ಶುದ್ಧೀಕರಣದಲ್ಲಿ ಉಪಯೋಗಿಸುವ ವಿದ್ಯುದ್ವಿಭಜನಾ ಕೋಶದ ಚಿತ್ರವನ್ನು ಬರೆದು, ಅಶುದ್ಧ ತಾಮ್ರವನ್ನು ಹೊಂದಿರುವ ವಿದ್ಯುದಗ್ರವನ್ನು ಗುರುತಿಸಿ.

***ಉತ್ತರ :***




ಚಿತ್ರಕ್ಕೆ — 1½

ಸರಿಯಾದ ಭಾಗಕ್ಕೆ — ½ 2



32. ಸಾವಯವ ಸಂಯುಕ್ತಗಳ ಒಂದು ಗುಂಪಿನ ಮೊದಲ ಸದಸ್ಯದ ಅಣುಸೂತ್ರ $CH_2O$ ( HCHO ) ಆಗಿದೆ. ಈ ಗುಂಪಿನ ಸದಸ್ಯರು ಅನುರೂಪ ಶ್ರೇಣಿಯಲ್ಲಿದ್ದರೆ, ಈ ಗುಂಪಿನ ಮೂರನೇ ಸದಸ್ಯದ ಹೆಸರು ಮತ್ತು ಅಣುಸೂತ್ರವನ್ನು ನಿರ್ಧರಿಸಿ. ಈ ಸಾವಯವ ಸಂಯುಕ್ತಗಳ ಗುಂಪಿಗಿರುವ ಸಾಮಾನ್ಯ ಹೆಸರೇನು ?

***ಉತ್ತರ :***

ಹೆಸರು → ಪ್ರೊಪೆನ್ಯಾಲ್ / ಪ್ರೊಪೆನ್ಯಾಲ್ಡಿಹೈಡ್ ½

ಅಣುಸೂತ್ರ → $C_3H_6O$ ( $C_2H_5CHO$ ) (ಯಾವುದಾದರೂ ಒಂದು) 1

ಆಲ್ಡಿಹೈಡ್‌ಗಳು ½ 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| 33. | ಸುರಕ್ಷಾ ಗಾಜನ್ನು ಹೇಗೆ ತಯಾರಿಸಲಾಗುತ್ತದೆ ? ಸುರಕ್ಷಾ ಗಾಜಿನ ಉಪಯೋಗವನ್ನು ತಿಳಿಸಿ.<br>***ಅಥವಾ***<br>ಈ ಕೆಳಗಿನ ಲಕ್ಷಣಗಳನ್ನು ಹೊಂದಿರುವ ಕಾಗದದ ವಿಧಗಳನ್ನು ಹೆಸರಿಸಿ. ಅವುಗಳ ಒಂದೊಂದು ಉಪಯೋಗವನ್ನು ತಿಳಿಸಿ.<br>(i) ಸಚ್ಛಿದ್ರ ಮತ್ತು ಅರೆಪಾರಕ ಪೊರೆ<br>(ii) ಅಂಟಿಕೊಳ್ಳದ ಗುಣಲಕ್ಷಣ<br>***ಉತ್ತರ :*** | | |
| | ಸಂಶ್ಲೇಷಿತ ವಿನೈಲ್ ಪ್ಲಾಸ್ಟಿಕ್ ಅನ್ನು ಎರಡು ಅಥವಾ ಮೂರು ಗಾಜಿನ ಹಾಳೆಗಳ ನಡುವೆ ಸೇರಿಸುತ್ತಾರೆ. | ½ | |
| | ಇದರ ಮೇಲೆ ಕಡಿಮೆ ಪ್ರಮಾಣದ ಒತ್ತಡ ಹಾಕಲಾಗುತ್ತದೆ. | ½ | |
| | ಪ್ಲಾಸ್ಟಿಕ್ ಮತ್ತು ಗಾಜಿನ ಹಾಳೆಗಳು ಏಕರೂಪವಾಗುವವರೆಗೆ ನಿಧಾನವಾಗಿ ಕಾಸಲಾಗುತ್ತದೆ. ತಂಪುಗೊಳಿಸಿದಾಗ ಗಾಜು ಕಠಿಣವಾಗುತ್ತದೆ. | ½ | |
| | ಮೋಟಾರು ವಾಹನಗಳಲ್ಲಿ / ವಿಮಾನ ತಯಾರಿಕಾ ಘಟಕಗಳಲ್ಲಿ ಗಾಳಿ ತೆರೆಗಳಾಗಿ ಬಳಸುತಾರೆ. | ½ | 2 |
| | ***ಅಥವಾ*** | | |
| | i) ಸೋಸು ಕಾಗದ | ½ | |
| | ದ್ರವ ಅಥವಾ ಗಾಳಿಯಿಂದ ಸೂಕ್ಷ್ಮಕಣಗಳನ್ನು ಪ್ರತ್ಯೇಕಿಸಲು / ಅದ್ದುವ ಚಹಾ ಚೀಲಗಳ ತಯಾರಿಕೆ. (ಯಾವುದಾದರೂ ಒಂದು) | ½ | |
| | ii) ಮೇಣದ ಕಾಗದ | ½ | |
| | ಆಹಾರ ಸಂರಕ್ಷಣೆಯಲ್ಲಿ, ಐಸ್‌ಕ್ರೀಮ್, ಕುಕ್ಕೀಸ್ ಮೇಲೆ ಸುತ್ತಲು ಉಪಯೋಗಿಸುತ್ತಾರೆ. | ½ | 2 |
| 36. | ಪ್ರೋಪೈನ್ ಮತ್ತು ಐಸೋಬ್ಯೂಟೇನ್‌ಗಳ ಅಣುಸೂತ್ರ ಮತ್ತು ರಚನಾಸೂತ್ರಗಳನ್ನು ಬರೆಯಿರಿ.<br>***ಉತ್ತರ :*** | | |
| | $C_3H_4$ | ½ | |
| |  | ½ | |
| | $C_4H_{10}$ | $\frac{1}{2}$ | |
| |  | ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 39. | ಈ ಕೆಳಗಿನ ರಾಸಾಯನಿಕ ಕ್ರಿಯೆಗಳಿಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣಗಳನ್ನು ಬರೆಯಿರಿ.<br>(i) ಸೋಡಿಯಂ ನೀರಿನೊಂದಿಗೆ ವರ್ತಿಸಿದಾಗ<br>(ii) ಸತು ಸಾರತೆ ಕಡಿಮೆ ಇರುವ ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿದಾಗ<br>***ಉತ್ತರ :***<br>$2Na + 2H_2O \rightarrow 2NaOH + H_2 \uparrow$ 1<br>$Zn + 2HCl \rightarrow ZnCl_2 + H_2 \uparrow$ 1 | 2 |
| 40. | ಈ ಕೆಳಗಿನವುಗಳಿಗೆ ವೈಜ್ಞಾನಿಕ ಕಾರಣ ಕೊಡಿ.<br>(i) ಕುಂಭಕಗಳ ತಯಾರಿಕೆಯಲ್ಲಿ ಫೆಲ್ಡ್‌ಸ್ಪಾರ್ ಅನ್ನು ಉಪಯೋಗಿಸುತ್ತಾರೆ.<br>(ii) ಕುಂಭಕಗಳು ವಿದ್ಯುತ್ ಉಪಕರಣಗಳ ಭಾಗಗಳಾಗಿವೆ.<br>***ಉತ್ತರ :***<br>i) ಕುಂಭಕಗಳು ನಯ ಮತ್ತು ಗಟ್ಟಿಯಾಗುತ್ತವೆ. 1<br>ii) ಅವು ಉತ್ತಮ ವಿದ್ಯುತ್ ನಿರೋಧಕಗಳು 1 | 2 |
| 49. | A, B, C, D ಮತ್ತು E ಎಂಬ ಐದು ಧಾತುಗಳ ಪರಮಾಣು ಸಂಖ್ಯೆಗಳು ಕ್ರಮವಾಗಿ, 6, 8, 3, 7 ಮತ್ತು 9 ಆಗಿದೆ.<br>(i) ಈ ಧಾತುಗಳಲ್ಲಿ ಅತ್ಯಂತ ಹೆಚ್ಚು ವಿದ್ಯುತ್ ಧನೀಯತೆಯನ್ನು ಹೊಂದಿರುವ ಧಾತು ಯಾವುದು ? ಏಕೆ ?<br>(ii) ಈ ಧಾತುಗಳಲ್ಲಿ ಅತ್ಯಂತ ಕಡಿಮೆ ಲೋಹೀಯ ಗುಣವನ್ನು ಹೊಂದಿರುವ ಧಾತು ಯಾವುದು ? ಏಕೆ ?<br>(iii) ಒಂದು ಧಾತುವಿನ ಲೋಹೀಯ ಗುಣ ಮತ್ತು ವಿದ್ಯುತ್ ಧನೀಯತೆಗಿರುವ ಸಂಬಂಧದ ಬಗ್ಗೆ ನಿಮ್ಮ ತೀರ್ಮಾನವೇನು ?<br>***ಉತ್ತರ :***<br>i) '*C*'. ½<br>ಈ ಧಾತುವು ಎರಡನೆ ಆವರ್ತದಲ್ಲಿ ಮೊದಲು ಬರುತ್ತದೆ / ವಿದ್ಯುದ್ಧನೀಯತೆಯು ಆವರ್ತದ ಮುಂದೆ ಸಾಗಿದಂತೆ ಕಡಿಮೆಯಾಗುತ್ತದೆ / ಈ ಧಾತುವಿನ ಹೊರಕವಚದಲ್ಲಿ ಒಂದು ಎಲೆಕ್ಟ್ರಾನ್ ಇದೆ. ಇದು ಎಲೆಕ್ಟ್ರಾನ್ ಅನ್ನು ಸುಲಭವಾಗಿ ಬಿಟ್ಟುಕೊಡುತ್ತದೆ. ½<br>ii) '*E*'. ½<br>ಈ ಧಾತುವು ಎರಡನೇ ಆವರ್ತದ ಕೊನೆಯ ಭಾಗದಲ್ಲಿದೆ / ಧಾತುವಿನ ಲೋಹೀಯ ಗುಣವು ಆವರ್ತದ ಮುಂದೆ ಸಾಗಿದಂತ ಕಡಿಮೆಯಾಗುತ್ತದೆ / ಅದು ಎಲೆಕ್ಟ್ರಾನ್‌ಗಳನ್ನು ಸ್ವೀಕರಿಸುತ್ತದೆ. ½<br>iii) ವಿದ್ಯುತ್ ಧನೀಯತೆ ಹೆಚ್ಚಾದಂತೆ ಲೋಹೀಯ ಗುಣ ಹೆಚ್ಚಾಗುತ್ತದೆ.<br>ಅಥವಾ | |

| ಪ್ರಶ್ನೆ ಸಂಖ್ಯೆ | | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|---|
| | | ವಿದ್ಯುತ್ ಧನೀಯತೆ ಕಡಿಮೆಯಾದಂತೆ ಲೋಹೀಯ ಗುಣ ಕಡಿಮೆಯಾಗುತ್ತದೆ.<br>ಅಥವಾ<br>ವಿದ್ಯುತ್ ಧನೀಯತೆ ಮತ್ತು ಲೋಹೀಯ ಗುಣಗಳು ಪರಸ್ಪರ ನೇರವಾಗಿ ಸಂಬಂಧಿಸಿವೆ. | 1 | 3 |
| 51. | (a) | ಈ ಕೆಳಗಿನ ರಾಸಾಯನಿಕ ಸಮೀಕರಣಗಳನ್ನು ಗಮನಿಸಿ.<br>(i) $Al_2O_3 + 2NaOH \rightarrow 2NaAlO_2 + H_2O$<br>(ii) $Al_2O_3 + 6HCl \rightarrow 2AlCl_3 + 3H_2O$<br>ಈ ಸಮೀಕರಣಗಳ ಸಹಾಯದಿಂದ ಅಲ್ಯೂಮಿನಿಯಂ ಆಕ್ಸೈಡ್‌ನ ಸ್ವಭಾವದ ಬಗ್ಗೆ ನೀವು ತೆಗೆದುಕೊಳ್ಳುವ ತೀರ್ಮಾನವೇನು ? ನಿಮ್ಮ ತೀರ್ಮಾನಕ್ಕೆ ಕಾರಣ ಕೊಡಿ. | | |
| | (b) | ಅಲ್ಯೂಮಿನಿಯಂ ಅನ್ನು ವಿದ್ಯುದ್ವಿಭಜನೆ ಕ್ರಿಯೆಯಿಂದ ಉತ್ಪಾದಿಸುವಾಗ ದ್ರವಿತ ಕ್ರಯೋಲೈಟ್ ಅನ್ನು ದ್ರವಿತ ಅಲ್ಯೂಮಿನಾದೊಂದಿಗೆ ಬೆರೆಸುತ್ತಾರೆ. ಏಕೆ ? ಈ ವಿಧಾನದಲ್ಲಿ ಧನಾಗ್ರ ಮತ್ತು ಋಣಾಗ್ರಗಳಾಗಿ ಬಳಸುವ ವಸ್ತುಗಳನ್ನು ಹೆಸರಿಸಿ. | | |
| | *ಉತ್ತರ :* | | | |
| | a) | ಅಲ್ಯೂಮಿನಿಯಂ ಆಕ್ಸೈಡ್ ಒಂದು ಉಭಯವರ್ತಿ ಆಕ್ಸೈಡ್. | 1 | |
| | | ಮೊದಲ ಸಮೀಕರಣದಲ್ಲಿ ಅಲ್ಯೂಮಿನಿಯಂ ಆಕ್ಸೈಡ್ ಪ್ರತ್ಯಾಮ್ಲದೊಂದಿಗೆ ವರ್ತಿಸಿ, ಲವಣ ಮತ್ತು ನೀರನ್ನು ಉಂಟು ಮಾಡಿದೆ. | ½ | |
| | | ಎರಡನೇ ಸಮೀಕರಣದಲ್ಲಿ ಅದು ಆಮ್ಲದೊಂದಿಗೆ ವರ್ತಿಸಿ, ಲವಣ ಮತ್ತು ನೀರನ್ನು ಉಂಟು ಮಾಡಿದೆ. | ½ | |
| | | ಅದು ಉಭಯವರ್ತಿ ಆಕ್ಸೈಡ್ | | |
| | b) | ★ ದ್ರವಿತ ಕ್ರಯೋಲೈಟ್ ದ್ರವಿತ ಅಲ್ಯೂಮಿನಾಗೆ ದ್ರಾವಕದಂತೆ ವರ್ತಿಸುತ್ತದೆ. ಅದು ಕಡಿಮೆ ತಾಪದಲ್ಲಿ ವಿದ್ಯುದ್ವಿಶ್ಲೇಷಕ ದ್ರಾವಣವನ್ನು ಉಂಟು ಮಾಡುತ್ತದೆ. | ½ | |
| | | ★ ಉನ್ನತ ತಾಪದ ವಿದ್ಯುದ್ವಿಶ್ಲೇಷಣೆಯನ್ನು ತಡೆಗಟ್ಟಬಹುದು. ಇದು ಅಲ್ಯೂಮಿನಿಯಂ ಆವಿರೂಪದಲ್ಲಿ ನಷ್ಟವಾಗುವುದನ್ನು ತಪ್ಪಿಸುತ್ತದೆ. | ½ | |
| | | ★ ಆ್ಯನೋಡ್ → ಗ್ರ್ಯಾಫೈಟ್ ಸರಳುಗಳು | ½ | |
| | | ★ ಕ್ಯಾಥೋಡ್ → ಕಾರ್ಬನ್ ಅಸ್ತರಿ | ½ | 4 |